# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 659 (701) |
| ಸದಸ್ಯರ ಹೆಸರು | ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.09.2022 |
| ಉತ್ತರಿಸಬೇಕಾದ ಸಚಿವರು | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಠ್ಯ ಪುಸ್ತಕಗಳಲ್ಲಿ ಬಾಬಾಬುಡನ್ ಗಿರಿ ಬದಲು "ಇನಾಮ್ ದತ್ತಾತ್ರೇಯ ಪೀಠ (ದತ್ತಪೀಠ)" ಎಂದು ನಮೂದಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು. | ಪಠ್ಯ ಪುಸ್ತಕಗಳಲ್ಲಿ ಈ ಮೊದಲು ಬಾಬಾಬುಡನ್ ಗಿರಿ ಎಂದು ಹೆಸರಿಸಿದ್ದನ್ನು, ಬಾಬಾಬುಡನ್ ಗಿರಿ ("ಇನಾಮ್ ದತ್ತಾತ್ರೇಯ ಪೀಠ') ಎಂದು ತಿದ್ದುಪಡಿ ಮಾಡಲಾಗಿರುತ್ತದೆ. |
| ಆ) | ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿಯು ಸರ್ಕಾರಿ ದಾಖಲೆಗಳಲ್ಲಿ ಇನಾಮ್ ದತ್ತಾತ್ರೇಯ ಪೀಠ ಎಂದು ನಮೂದಾಗಿದ್ದರೂ ಪಠ್ಯಪುಸ್ತಕಗಳಲ್ಲಿ ಬಾಬಾಬುಡನ್ ಗಿರಿ ಎಂದು ನಮೂದಿಸಿರುವುದು ಯಾವ ಕಾರಣಕ್ಕೆ (ವಿವರ ನೀಡುವುದು) | ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಗಿರಿಯನ್ನು, ಪಠ್ಯ ಪುಸ್ತಕಗಳಲ್ಲಿ ಬಾಬಾಬುಡನ್ ಗಿರಿ ("ಇನಾಮ್ ದತ್ತಾತ್ರೇಯ ಪೀಠ") ಎಂದು ತಿದ್ದುಪಡಿ ಮಾಡಲಾಗಿರುತ್ತದೆ. |
| ಇ) | 4ನೇ, 6ನೇ & 9ನೇ ತರಗತಿ ಪಠ್ಯಪುಸ್ತಕಗಳಲ್ಲಿ ಬಾಬಾಬುಡನ್ ಗಿರಿ ಬದಲು ಇನಾಮ್ ದತ್ತಾತ್ರೇಯ ಪೀಠ ಎಂದು ತಿದ್ದುಪಡಿ ಮಾಡಲಾಗಿದೆಯೇ, ಮಾಡಿದ್ದಲ್ಲಿ ಪ್ರತಿಯನ್ನು ನೀಡುವುದು, ತಿದ್ದುಪಡಿ ಮಾಡದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ತಿದ್ದುಪಡಿ ಮಾಡಲಾಗುವುದು. | 4ನೇ ಮತ್ತು 9ನೇ ತರಗತಿ ಪಠ್ಯ ಪುಸ್ತಕಗಳಲ್ಲಿ ಬಾಬಾಬುಡನ್ ಗಿರಿ ಎಂಬ ಪದವನ್ನು ಬಾಬಾಬುಡನ್ ಗಿರಿ ("ಇನಾಮ್ ದತ್ತಾತ್ರೇಯ ಪೀಠ") ಎಂದು ತಿದ್ದುಪಡಿ ಮಾಡಲಾಗಿರುತ್ತದೆ.<br>(ಪ್ರತಿ ಲಗತ್ತಿಸಿದೆ). |
| ಈ) | ದತ್ತಪೀಠದ ಜೊತೆಯಲ್ಲಿ ರಾಜ್ಯದ ಇತರೆ ಐತಿಹಾಸಿಕ ಸ್ಥಳಗಳ ಹೆಸರುಗಳು ತಪ್ಪಾಗಿ ನಮೂದಾಗಿದ್ದರೆ ಅವುಗಳನ್ನು ಸರಿಪಡಿಸುವ ಕುರಿತು ಸರ್ಕಾರ ಏನಾದರೂ ಕ್ರಮಗಳನ್ನು ಕೈಗೊಳ್ಳುತ್ತಿದೆಯೇ (ಮಾಹಿತಿ ನೀಡುವುದು) | ಐತಿಹಾಸಿಕ ಸ್ಥಳಗಳ ಹೆಸರುಗಳು ಪಠ್ಯ ಪುಸ್ತಕಗಳಲ್ಲಿ ತಪ್ಪಾಗಿ ನಮೂದಾಗಿರುವ ಬಗ್ಗೆ ಗಮನಕ್ಕೆ ಬಂದಲ್ಲಿ, ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುವುದು. |

ಇಪಿ 313 ಪಿಎಂಸಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.

4ನೆ ತರಗತಿ ಪರಿಸರ ಅಧ್ಯಯನ

ನಮ್ಮ ರಾಜ್ಯ ನಮ್ಮ ಹೆಮ್ಮೆ

ನಿಮ್ಮ ಊರಿನಲ್ಲಿ ಅಥವಾ ಜಿಲ್ಲೆಯಲ್ಲಿರುವ ಯಾವುದಾದರೂ ಐತಿಹಾಸಿಕ ಸ್ಥಳವೊಂದರ ಬಗ್ಗೆ ನಾಲ್ಕು ವಾಕ್ಯಗಳನ್ನು ಬರೆ


________________________________________

________________________________________

________________________________________

________________________________________

ನಮ್ಮ ರಾಜ್ಯದ ಕೆಲವು ಸ್ಥಳಗಳು ಪ್ರಕೃತಿ ಸೌಂದರ್ಯದಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇವೇ ನಿಸರ್ಗಧಾಮಗಳು.



ನಂದಿಬೆಟ್ಟ, ಬಾಬಾಬುಡನ್ ಗಿರಿ (ಇನಾಮ್ ದತ್ತಾತ್ರೇಯ ಪೀಠ), ಮುಳ್ಳಯ್ಯನ ಗಿರಿ, ಕೆಮ್ಮಣ್ಣುಗುಂಡಿ, ಕುದುರೆಮುಖ, ಕೊಡಚಾದ್ರಿ ಇವು ಪ್ರಮುಖ ಗಿರಿಧಾಮಗಳು.

# ಕರ್ನಾಟಕ ಪ್ರಾಕೃತಿಕ ವೈವಿಧ್ಯ

ಕರ್ನಾಟಕದಲ್ಲಿ ವರ್ಜೀನಿಯಾ, ಬೀಡಿ ತಂಬಾಕು ಮತ್ತು ಜಗಿಯಲು ಬಳಸುವಂತಹ ತಂಬಾಕನ್ನು ಬೆಳೆಯಲಾಗುತ್ತದೆ. ವರ್ಜೀನಿಯಾ ತಂಬಾಕು ಉತ್ತಮ ದರ್ಜೆಯದ್ದಾಗಿದ್ದು, ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಬೇಡಿಕೆ ಗಳಿಸಿದೆ. ಇದರಿಂದ ವಿದೇಶಿ ವಿನಿಮಯದ ಗಳಿಕೆ ಮತ್ತು ಅಬಕಾರಿ ರೂಪದಲ್ಲಿ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಆದಾಯ ದೊರೆಯುವುದು.

**ಬೆಳೆಯುವ ಪ್ರದೇಶಗಳು :** ಕರ್ನಾಟಕವು ಭಾರತದ ಪ್ರಮುಖ ತಂಬಾಕು ಉತ್ಪಾದಿಸುವ ರಾಜ್ಯಗಳಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಮೈಸೂರು ಜಿಲ್ಲೆಯು ತಂಬಾಕು ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಹಾಸನ, ಶಿವಮೊಗ್ಗ, ಕೊಡಗು, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ರಾಯಚೂರು, ದಾವಣಗೆರೆ, ತುಮಕೂರು, ಗದಗ ಜಿಲ್ಲೆಗಳಲ್ಲಿಯೂ ತಂಬಾಕಿನ ಬೇಸಾಯ ಹಂಚಿಕೆಯಾಗಿದೆ. ಬೆಳಗಾವಿ ಜಿಲ್ಲೆಯ 'ನಿಪ್ಪಾಣಿ' ಯು ದೇಶದಲ್ಲಿ ಬೀಡಿ ತಯಾರಿಕಾ ತಂಬಾಕು ಮಾರುಕಟ್ಟೆಗೆ ಅತ್ಯಂತ ಪ್ರಸಿದ್ಧವಾದುದು. ಕರ್ನಾಟಕದಲ್ಲಿ ಬೆಳೆಯುವ ತಂಬಾಕು ವಿಶ್ವದರ್ಜೆಯದಾಗಿದ್ದು, ಉತ್ಪಾದನೆಯ ಬಹುಪಾಲು ರಫ್ತಾಗುವುದು.

**4. ಕಾಫಿ (Coffee) :** ಕಾಫಿಯು ಕರ್ನಾಟಕದ ಪ್ರಸಿದ್ಧ ನೆಡುತೋಟದ ಹಾಗೂ ಪಾನೀಯ ಬೆಳೆ. ಕರ್ನಾಟಕವು ಭಾರತದಲ್ಲೇ ಕಾಫಿಯ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಕ್ರಿ.ಶ. 1670 ರ ಸುಮಾರಿಗೆ ಬಾಬಾಬುಡನ್ ಎಂಬ ಮುಸ್ಲಿಂ ಸಂತನು ಚಿಕ್ಕಮಗಳೂರಿನ ಬೆಟ್ಟಗಳ ಸಾಲಿನಲ್ಲಿ ಕಾಫಿ ಸಸಿಗಳನ್ನು ಬೆಳೆಸಿದನು. ಆದ್ದರಿಂದ ಆ ಬೆಟ್ಟಗಳನ್ನು ಬಾಬಾಬುಡನ್‌ಗಿರಿ (ಇನಾಮ್ ದತ್ತಾತ್ರೇಯ ಪೀಠ) ಎನ್ನುವರು. ಆದರೆ ಕ್ರಮಬದ್ಧವಾದ ಬೇಸಾಯವು 1826 ರಲ್ಲಿ ಪ್ರಾರಂಭವಾಗಿ ಇಂದು ಕರ್ನಾಟಕದಲ್ಲಿ ವಿಸ್ತಾರವಾದ ಕಾಫಿ ತೋಟಗಳು ಕಂಡುಬರುತ್ತವೆ.

> **ಚಟುವಟಿಕೆ**
>
> ಶಾಲೆಗೆ ರೈತರನ್ನು ಆಹ್ವಾನಿಸಿ ಅವರು ಬೆಳೆಯುವ ಬೆಳೆಗಳ ಪದ್ಧತಿ, ಅವುಗಳ ಮಾರಾಟದ ಬಗ್ಗೆ ಸಂವಾದ ನಡೆಸಿ.

ಕರ್ನಾಟಕವು ಅರೇಬಿಕ ಹಾಗೂ ರೊಬುಸ್ಟ ಎಂಬ ಎರಡು ಪ್ರಭೇದದ ಕಾಫಿಯನ್ನು ಉತ್ಪಾದಿಸುತ್ತಿದೆ. ಇದರಲ್ಲಿ ಅರೇಬಿಕ ಶ್ರೇಷ್ಠ ದರ್ಜೆಯದಾಗಿದ್ದು ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಪಡೆದಿದೆ. ಕಾಫಿಯು ಉಷ್ಣವಲಯದ ಅಧಿಕ ಮಳೆ ಪಡೆಯುವ ಬೆಟ್ಟಗಳ ಇಳಿಜಾರುಗಳಲ್ಲಿ ಬೆಳೆಯುವ ಬೆಳೆ. ಜೇಡಿಮಿಶ್ರಿತ ಮಣ್ಣು ಈ ಬೆಳೆಗೆ ಸೂಕ್ತ. ಕಾಫಿ ಗಿಡಕ್ಕೆ ಸೂರ್ಯನ ನೇರ ಕಿರಣಗಳು ಬೀಳದಂತೆ ನೆರಳಿನ ಮರಗಳನ್ನು ಬೆಳೆಸಬೇಕು. ಮಳೆಯ ನೀರು ಹರಿದು ಹೋಗುವಂತಿರಬೇಕು. ಈ ಎಲ್ಲಾ ಅಂಶಗಳಿರುವ ಕರ್ನಾಟಕದ ಮಲೆನಾಡಿನಲ್ಲಿ ಕಾಫಿ ಬೆಳೆಯಲಾಗುತ್ತದೆ.

**ಬೆಳೆಯುವ ಪ್ರದೇಶಗಳು :** ದೇಶದ ಕಾಫಿಯ ಉತ್ಪಾದನೆಯಲ್ಲಿ ಶೇ. 70 ಭಾಗವನ್ನು ಕರ್ನಾಟಕವೇ ಉತ್ಪಾದಿಸುತ್ತಿದೆ. ಕೊಡಗು ಜಿಲ್ಲೆಯು ಕಾಫಿ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಚಿಕ್ಕಮಗಳೂರು, ಹಾಸನ ಪ್ರಮುಖವಾದವು. ಶಿವಮೊಗ್ಗ, ಚಾಮರಾಜನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಕಾಫಿ ಬೇಸಾಯವಿದೆ.

> **ಚಟುವಟಿಕೆ**
>
> ಸಾವಯವ ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ.

ಕರ್ನಾಟಕದಲ್ಲಿ ಬೆಳೆಯುವ ಕಾಫಿ ಅತ್ಯುತ್ತಮವಾಗಿದ್ದು, ರುಚಿ ಮತ್ತು ಆಹ್ಲಾದತೆಗೆ ಹೆಚ್ಚು ಹೆಸರುವಾಸಿಯಾಗಿದೆ. ಇದರಿಂದಾಗಿ ದೇಶ ವಿದೇಶಗಳಲ್ಲಿ ಕಾಫಿಯು ಉತ್ತಮವಾದ ಮಾರುಕಟ್ಟೆ ಹೊಂದಿದೆ. ಇದರಿಂದ ಕರ್ನಾಟಕವು 'ಕಾಫಿಯ ನಾಡು' ಎಂದೇ ಪ್ರಸಿದ್ಧವಾಗಿದೆ.

ಕರ್ನಾಟಕದ ಭೂಸಂಪತ್ತು

ಕೋಲಾರದ ದಕ್ಷಿಣ ಭಾಗಗಳು, ಮಂಡ್ಯ, ರಾಮನಗರ ಮತ್ತು ಬೆಂಗಳೂರಿನ ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ತೇಗ, ಹೊನ್ನೆ, ಮತ್ತಿ, ಬೇವು, ಮಾವು, ಹಲಸು, ಮುತ್ತುಗ, ಬಾಗೆ, ಆಲ, ಶ್ರೀಗಂಧ ಮತ್ತು ಬಿದಿರು ಇಲ್ಲಿ ಬೆಳೆಯುವ ಪ್ರಮುಖ ಮರಗಳು. ಇವು ದಟ್ಟವಾಗಿ ಬೆಳೆಯುವುದಿಲ್ಲ.

**3. ಮಿಶ್ರ ಬಗೆಯ ಕಾಡುಗಳು :** ನಿತ್ಯಹರಿದ್ವರ್ಣ ಮತ್ತು ಅಗಲ ಎಲೆಗಳನ್ನುಳ್ಳ ಎಲೆ ಉದುರಿಸುವ ಪ್ರಕಾರದ ಮರಗಳು ಬೆಳೆಯುವ ಸಸ್ಯವರ್ಗವೇ ಮಿಶ್ರ ಬಗೆಯ ಕಾಡುಗಳು. ವಾರ್ಷಿಕ 120–150 ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಇಂತಹ ಸಸ್ಯವರ್ಗ ಕಂಡುಬರುತ್ತದೆ. ಇಂತಹ ಕಾಡುಗಳು ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡದ ಕೆಲವು ಭಾಗಗಳು, ಕೊಡಗಿನ ಪೂರ್ವಭಾಗ ಹಾಗೂ ಚಿಕ್ಕಮಗಳೂರು, ಹಾಸನ ಮತ್ತು ಮೈಸೂರು ಜಿಲ್ಲೆಯ ಭಾಗಗಳಲ್ಲಿ ಕಂಡು ಬರುತ್ತವೆ. ತೇಗ, ಹೊನ್ನೆ, ಮತ್ತಿ, ನಂದಿ, ದಿಂಡಗ, ಶ್ರೀಗಂಧ, ಹಲಸು ಮತ್ತು ಬಿದಿರು ಇಲ್ಲಿ ಬೆಳೆಯುವ ಪ್ರಮುಖ ಮರಗಳು.

**4. ಹುಲ್ಲುಗಾವಲು ಮತ್ತು ಕುರುಚಲು ಸಸ್ಯಗಳು :** ಕರ್ನಾಟಕದಲ್ಲಿ 60 ಸೆಂ.ಮೀ.ಗಿಂತ ಕಡಿಮೆ ವಾರ್ಷಿಕ ಮಳೆ ಬೀಳುವ ಪ್ರದೇಶಗಳಲ್ಲಿ ಇಂತಹ ಸಸ್ಯವರ್ಗ ಹಂಚಿಕೆಯಾಗಿದೆ. ಮಳೆಯ ಕೊರತೆ ಮತ್ತು ಒಣಹವೆಯಿಂದಾಗಿ ಕುರುಚಲು ಗಿಡ ಮತ್ತು ಮುಳ್ಳಿನ ಗಿಡಗಳು ಬೆಳೆಯುತ್ತವೆ. ಉದಾ : ಕಳ್ಳಿ, ಕತ್ತಾಳೆ, ಕರಿಜಾಲಿ, ಬೇಲ, ಈಚಲು, ಹಂಚಿ ಮತ್ತು ಕುಂತಿ ಹುಲ್ಲು ಇತ್ಯಾದಿ. ಅಲ್ಲಲ್ಲಿ ಆಲ, ಬೇವು, ಅರಳಿ, ಮುತ್ತುಗದಂತಹ ಮರಗಳು ಬೆಳೆಯುತ್ತವೆ. ಇಂತಹ ಸಸ್ಯವರ್ಗವು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯಾಪುರ, ಬಳ್ಳಾರಿ, ಚಿತ್ರದುರ್ಗ ಇತ್ಯಾದಿ ಜಿಲ್ಲೆಗಳಲ್ಲಿ ಹಂಚಿಕೆಯಾಗಿದೆ.

ಕರಾವಳಿಯಂಚಿನಲ್ಲಿರುವ ನದಿ ಮುಖಜಭೂಮಿ, ಅಳಿವೆಗಳು ಹಾಗೂ ಮರಳು ದಂಡೆಗಳ ಭಾಗಗಳಲ್ಲಿ ಬಿಳಿಲುಗಳಿಂದ ಕೂಡಿರುವ ಸಸ್ಯಗಳಿವೆ. ಇವು ಉಪ್ಪು ನೀರಿನಲ್ಲಿ ಬೆಳೆಯುವ ವಿಶಿಷ್ಟವಾದ ಸಾಮರ್ಥ್ಯವನ್ನು ಹೊಂದಿವೆ. ಇದನ್ನೇ 'ಮ್ಯಾಂಗ್ರೋವ್ ಸಸ್ಯ'ಗಳೆನ್ನುವರು. ಇವುಗಳ ಹಂಚಿಕೆ ಅತ್ಯಲ್ಪ.

ಸುಮಾರು 1400 ಮೀ. ಗಿಂತ ಹೆಚ್ಚು ಎತ್ತರವುಳ್ಳ ಭಾಗದಲ್ಲಿ ತಂಪಾದ ವಾಯುಗುಣವಿರುವ ಕುದುರೆಮುಖ, ಬಾಬಾಬುಡನ್‌ಗಿರಿ (ಇನಾಮ್ ದತ್ತಾತ್ರೇಯ ಪೀಠ), ಬಿಳಿಗಿರಿರಂಗನಬೆಟ್ಟ, ಕೊಡಗಿನ ಬ್ರಹ್ಮಗಿರಿ ಸರಣಿಗಳ ಇಳಿಜಾರುಗಳು ಹುಲ್ಲುಗಾವಲಿನಿಂದ ಕೂಡಿವೆ. ಇವುಗಳ ತಗ್ಗಾದ ಕಣಿವೆಗಳು ಝರಿ, ತೊರೆಗಳಿಂದ ಕೂಡಿದ ಭಾಗಗಳಲ್ಲಿ ವಿಶಿಷ್ಟವಾದ 'ಶೋಲಾ ಕಾಡುಗಳು' ಬೆಳೆಯುತ್ತವೆ.

**ನಿಮಗೆ ತಿಳಿದಿರಲಿ**

- ಬೆಂಗಳೂರು ಸಮೀಪ ರಾಮೋಹಳ್ಳಿಯಲ್ಲಿ ಅತಿದೊಡ್ಡ ಆಲದ ಮರವಿದೆ.
- ಶಿಡ್ಲಘಟ್ಟದ ಟಿ. ವೆಂಕಟಾಪುರ ಬಳಿ ಅತಿದೊಡ್ಡ ಬೇವಿನ ಮರವಿದೆ.
- ಸವಣೂರಿನ ಬಳಿ ಬೃಹತ್ ಹುಣಸೆ ಮರವಿದೆ.

**ಅರಣ್ಯಗಳ ಹಂಚಿಕೆ**

ಎಲ್ಲಾ ವಿಧದ ಅರಣ್ಯಗಳು ಒಳಗೊಂಡಂತೆ, ಕರ್ನಾಟಕದಲ್ಲಿ ದಾಖಲಾದ ಅರಣ್ಯ ಪ್ರದೇಶ 43.4 ಲಕ್ಷ ಚ.ಕಿ.ಮೀ.ಗಳು. ಇದು ರಾಜ್ಯದ ಭೌಗೋಳಿಕ ಪ್ರದೇಶದಲ್ಲಿ ಶೇ.22.6 ಭಾಗದಷ್ಟಾಯಿತು. ಭಾರತದಲ್ಲಿ ಸಮೃದ್ಧ ಅರಣ್ಯಗಳನ್ನುಳ್ಳ ರಾಜ್ಯಗಳಲ್ಲಿ ಕರ್ನಾಟಕವು ಏಳನೆಯ ಸ್ಥಾನದಲ್ಲಿದೆ. ಉತ್ತರ ಕನ್ನಡ ಹೆಚ್ಚು ಅರಣ್ಯ ಪ್ರದೇಶವನ್ನೊಳಗೊಂಡ ಜಿಲ್ಲೆ. ತರುವಾಯ ಶಿವಮೊಗ್ಗ ಮತ್ತು ಚಾಮರಾಜನಗರ ಜಿಲ್ಲೆಗಳು ಕ್ರಮವಾಗಿ ಎರಡು ಮತ್ತು ಮೂರನೆಯ ಸ್ಥಾನಗಳಲ್ಲಿವೆ. ವಿಜಯಪುರ ಅತಿ ಕಡಿಮೆ ಅರಣ್ಯವುಳ್ಳ ಜಿಲ್ಲೆಯಾಗಿದೆ.